# ಪ್ರವಚನಮಾಲೆ ಉದ್ಘಾಟನೆ

ಚಿತ್ರದುರ್ಗ ಅ. 1 – ಮುರುಘಾಮಠ ಸರ್ವಾಂಗೀಣ ಸುಂದರವಾಗಿ ಹೊಸ ಆಲೋಚನೆಗಳಿಗೆ ಒಳಗಾಗಿದೆ ಅಂದರೆ ಅದು ಶ್ರಮದ ಮೂಲಕವೇ ಆಗಿದೆ. ಪ್ರಯೋಗ ಆಯಾಮಕ್ಕೆ ಹತ್ತಿರವಾದ ಪದ. ಮಹಿಳೆಯರಿಗೆ ಸ್ವಾತಂತ್ರ್ಯವಿರಲಿಲ್ಲ. ದಲಿತರಿಗೆ ಧಾರ್ಮಿಕ ಹಕ್ಕು ಇರಲಿಲ್ಲ. ಅದನ್ನು ಪಡೆದುಕೊಳ್ಳಲು ಶ್ರಮಿಸುವುದೇ ಆಯಾಮ. ವ್ಯಾಯಾಮ ಉಳಿಯುವುದಿಲ್ಲ, ಆಯಾಮ ಉಳಿಯುತ್ತದೆ. ಶ್ರೀಮಠದಲ್ಲಿ ಒಂದೇಕಡೆ ಪಂಕ್ತಿಭೇದವಿಲ್ಲದ ಪ್ರಸಾದವನ್ನು ಸ್ವೀಕರಿಸುವ ಹಾಗೆ ಮಾಡಿದ್ದು ಅದು ಆಯಾಮ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಶರಣಸಂಸ್ಕೃತಿ ಉತ್ಸವಕ್ಕೆ ಪೂರ್ವಭಾವಿಯಾಗಿ ದಿ. 1-10-21 ರಿಂದ 12-10-21ರವರೆಗೆ ಆಯೋಜಿಸಲಾಗಿರುವ ವಿಶೇಷ ಪ್ರವಚನಮಾಲೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಶ್ರೀಗಳು, ಇದು ಕೊರೋನಾ ಕಾಲದ ಪ್ರವಚನ. ಕೊರೋನಾ ಕಾಲದ ಶರಣಸಂಸ್ಕೃತಿ ಉತ್ಸವ. ಕಳೆದ ವರ್ಷ ಸೀಮಿತವಾದ ಭಕ್ತಾದಿಗಳ ಜೊತೆಯಲ್ಲಿ ಸರಳವಾಗಿ ಶರಣಸಂಸ್ಕೃತಿ ಉತ್ಸವವನ್ನು ಮಾಡಲಾಯಿತು. ಇಂದು ಎಲ್ಲ ದೇಶಗಳೂ ಕೊರೋನಾ ಕೈಯಲ್ಲಿ ಇವೆ. ಇಂಥ ಸಂದರ್ಭದಲ್ಲಿ ಏನಾದರು ಒಂದು ಮಾಡಬೇಕಿದೆ. ಬಯಲುಸೀಮೆಯ ಓಯಸಿಸ್ ಮುರುಘಾಮಠ. ಇದು ಶ್ರದ್ಧೆಯ ಕೇಂದ್ರ, ವಿಶ್ವಾಸದ ಕೇಂದ್ರ ಬಸವಕೇಂದ್ರ. ಇಲ್ಲಿ ಸಾಂಸ್ಕೃತಿಕ ಪರಿಸರ ಅನಾವರಣಗೊಳ್ಳುತ್ತದೆ. ಇದನ್ನು ಕೇಳಿಸಿಕೊಂಡವರ ಬದುಕಿನ ಬೇಸರ ನಿವಾರಣೆಯಾಗುತ್ತದೆ. ಇದೊಂದು ಸುವರ್ಣಾವಕಾಶ. ದೂರದರ್ಶನ ಅದು ಅಪರೋಕ್ಷವಾಗಿದ್ದರೆ ಇಲ್ಲಿನ ಪ್ರವಚನ ಪ್ರತ್ಯಕ್ಷವಾಗಿರುತ್ತದೆ. ಇದು ತಾಜಾತನದಿಂದ ಕೂಡಿರುತ್ತದೆ. ಬುದ್ಧ, ಏಸು, ಬಸವಾದಿ ಶರಣರು ವ್ಯಾಯಾಮ ಮಾಡಲಿಲ್ಲ, ಆಯಾಮ ಮಾಡಿದರು. ಯಾರು ಕಾಯಕವನ್ನು ಮಾಡುತ್ತಾರೋ ಅವರಿಗೆ ವ್ಯಾಯಾಮದ ಅವಶ್ಯಕತೆ ಇಲ್ಲ ಎಂದರು.

ಹಾಗೆಯೇ ಆಯಾಮ ಮತ್ತು ವ್ಯಾಯಾಮದ ಜತೆಗೆ ವಿರಾಮ ಎಂಬ ಪದವಿದೆ. ಬದುಕಿನಲ್ಲಿ ಸಂಭವಿಸುವ ಬೇಸರಕ್ಕೆ, ರಾಗದ್ವೇಷಕ್ಕೆ, ಒತ್ತಡಕ್ಕೆ ಪೂರ್ಣವಿರಾಮವನ್ನು ಇಡಬೇಕು. ಬರದ ನಾಡಿಗೆ ಮಳೆ ಬಂದಾಗ ಆಗುವ ಖುಷಿಯಂತೆ ಭಕ್ತರ ಸಂಖ್ಯೆಯನ್ನು ನೋಡಿ ಖುಷಿಯಾಗುತ್ತದೆ. ನೀವು ನಿತ್ಯ 12ದಿನಗಳ ಪ್ರವಚನ ಮಾಲೆಯನ್ನು ಆಲಿಸಿ. ನಿಮ್ಮ ಬದುಕಿನಲ್ಲಿ ನೆಮ್ಮದಿಯನ್ನು ಪಡೆಯಿರಿ ಎಂದರು.

ಪ್ರವಚನ ನಡೆಸಿಕೊಟ್ಟ ಗದಗ ಜಿಲ್ಲೆ ಬೆಳ್ಳಟ್ಟಿ ವಿರಕ್ತಮಠದ ಶ್ರೀ ಬಸವರಾಜ ಸ್ವಾಮಿಗಳು, ಇದು ಕೊರೋನಾದ ಕಾಲ. ಎಲ್ಲರನ್ನು ದೂರವಾಗಿಸಿದ ಕಾಲ. ಇಂಥ ಸೂಕ್ಷ್ಮ ಸಂದರ್ಭದಲ್ಲಿ ಮನಸ್ಸುಗಳನ್ನು ಕಟ್ಟೋದು ತುಂಬಾ ಮುಖ್ಯ. ಸಂಸ್ಕಾರಗಳನ್ನು ಬೆಳೆಸಿಕೊಳ್ಳುವುದು ಮುಖ್ಯ. ಒಳ್ಳೆ ಉಪದೇಶಗಳು, ಸಂದೇಶಗಳು ಬೇಗನೆ ತಲೆಗೆ ಹತ್ತುವುದಿಲ್ಲ. ಆದರೆ ಕೆಟ್ಟ ವಿಚಾರಗಳು ಬೇಗನೆ ತಲೆಯೊಳಗೆ ಹೋಗುತ್ತವೆ. ವಚನ ಸಾಹಿತ್ಯದ ವಚನಗಳು ನಮ್ಮನ್ನು ಸದಾ ಎಚ್ಚರಿಸುತ್ತವೆ. ಶರಣರು ಇವತ್ತಿಗೆ ಉಳಿಸಬೇಡ ನಾಳೆಗೆ ಗಳಿಸಬೇಡ ಎಂದು ಹೇಳಿದ ಮಾತುಗಳು ಅತ್ಯಂತ ಮಾರ್ಮಿಕವಾದುವು. ಹರಿಹರ ಕವಿಯ ಕಾಲಘಟ್ಟದಲ್ಲಿ 101ಜನ ವಿರಕ್ತರಿದ್ದರು. ಶಿವಮೂರ್ತಿ ಮುರುಘಾ ಶರಣರ ಕಾಲಘಟ್ಟದಲ್ಲಿ ನಾವುಗಳು ಇರುವುದೇ ಭಾಗ್ಯವಾಗಿದೆ ಎಂದು ತಿಳಿಸಿದರು.

ಶರಣಸಂಸ್ಕೃತಿ ಉತ್ಸವ ಸಮಿತಿಯ ಗೌರವಾಧ್ಯಕ್ಷರಾದ ಶ್ರೀ ಬಸವಮೂರ್ತಿ ಮಾದಾರಚೆನ್ನಯ್ಯ ಸ್ವಾಮಿಗಳು, ಶ್ರೀ ಬಸವಕಿರಣ ಸ್ವಾಮಿಗಳು, ಕಾರ್ಯಾಧ್ಯಕ್ಷ ಕೆ.ಎಸ್. ನವೀನ್, ಖಜಾಂಚಿ ಎ.ಜೆ. ಪರಮಶಿವಯ್ಯ, ಎಸ್.ಜೆ.ಎಂ. ವಿದ್ಯಾಪೀಠದ ಶಿಕ್ಷಣಾಧಿಕಾರಿ ಸಿದ್ದಪ್ಪ ಬಿ., ಶಂಕರಮೂರ್ತಿ ಮೊದಲಾದವರು ಭಾಗವಹಿಸಿದ್ದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಎಸ್.ಜೆ.ಎಂ. ಆಂಗ್ಲಮಾಧ್ಯಮ ಶಾಲೆಯ ಇಮ್ರಾನ್ ಸ್ವಾಗತಿಸಿದರು. ಶ್ರೀಮತಿ ಅನಿತಾ ಶರಣು ಸಮರ್ಪಣೆ ಮಾಡಿದರು. ಶ್ರೀಮತಿ ನೇತ್ರಾವತಿ ಎಸ್.ಆರ್. ನಿರೂಪಿಸಿದರು.



